ನಿಜವಾದ ಗೆಲುವು.

**(ಆ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

**1. ಕಲಾಂ ಅವರು ರಾಂಚಿಯಿಂದ ಬೊಕಾರೋಗೆ ವಿಮಾನದಲ್ಲಿ ತೆರಳುವಾಗ ಯಾವ ದುರ್ಘಟನೆ ನಡೆಯಿತು?**

ಉ. ಕಲಾಂ ಅವರು 2001 ಸೆಪ್ಟೆಂಬರ್ 30ರಂದು ರಾಂಚಿಯಿಂದ ಬೊಕಾರೋಗೆ ಪ್ರಯಾಣಿಸುತ್ತಿದ್ದರು. ಅವರನ್ನು ಕರೆದೊಯ್ಯುತ್ತಿದ್ದ ಹಲಿಕಾಪ್ಟರ್‌ನ ಎಂಜಿನ್‌ನಲ್ಲಿ ಏನೋ ದೋಷ ಕಾಣಿಸಿಕೊಂಡಿತು. ಇನ್ನೇನು ಹೆಲಿಕಾಪ್ಟರ್ ಭೂಸ್ಪರ್ಶ ಮಾಡಬೇಕೆನ್ನುವಷ್ಟರಲ್ಲಿ ಭಾರೀ ಸದ್ದಿನೊಂದಿಗೆ ನೆಲಕ್ಕೆ ಅಪ್ಪಳಿಸಿತು.

**2. ಕಲಾಂ ಅವರಿಗೆ ನಿದ್ದೆಯಲ್ಲಿ ಯಾವ ಯಾವ ಯೋಚನೆಗಳು ಸುಳಿದಾಡಿದವು?**

ಉ. ಕಲಾಂ ಅವರಿಗೆ ಸವಿನಿದ್ದೆಯಂತೂ ಬಂದಿರಲಿಲ್ಲ. ಮಧ್ಯೆ ಮಧ್ಯೆ ಎಚ್ಚರಗೊಳ್ಳುತ್ತಿದ್ದರು. ಆಗ ಏನೇನೋ ಯೋಚನೆಗಳು ಸುಳಿದಾಡುತ್ತಿದ್ದವು. ಆ ದೇವರ ಸೃಷ್ಟಿಯಲ್ಲಿ ಅತ್ಯಂತ ಶ್ರೇಷ್ಠವಾದುದೆನ್ನಲಾದ ಮಾನವ ಕುಲ ಏಕೆ ಇಷ್ಟೊಂದು ವಿಭಜಿತವಾಗಿದೆ. ಇಷ್ಟೊಂದು ಹಿಂಸಾಚಾರಗಳಲ್ಲಿ ಏಕೆ ತೊಡಗಿಸಿಕೊಳ್ಳುತ್ತಿದೆ? ಹೀಗೆ ಏನೇನೋ ಯೋಚನೆಗಳು ಸುಳಿದಾಡಿದವು.

**3. ಕಲಾಂ ಅವರು ಕನಸಿನಲ್ಲಿ ಕಂಡ ಪ್ರದೇಶ ಯಾವ ರೀತಿ ಇತ್ತು?**

ಉ. ಕಲಾಂ ಅವರು ಕನಸಿಗಿಂತ ಎಷ್ಟೋ ಹೆಚ್ಚು ಸ್ಫುಟವಾದ ಅನುಭವದಲ್ಲಿ ಒಂದು ಮರುಭೂಮಿಯಲ್ಲಿ ಅವರಿರುವಂತೆ ಕಂಡರು. ಸುತ್ತ ಎತ್ತ ನೋಡಿದರೂ ಬರೀ ಮರಳು! ಮೈಲಿ-ಮೈಲಿ ಗಟ್ಟಲೆ ಮರಳು, ದೂರದಿಗಂತದವರೆಗೂ. ಆಗಸದಲ್ಲಿ ಪೂರ್ಣಚಂದ್ರ, ಮರಳುಗಾಡಿನುದ್ದಕ್ಕೂ ಹಾಲು ಬೆಳದಿಂಗಳನ್ನು ಕಂಡರು.

**4. ಅಶೋಕನು ನಡೆಸಿದ ಎರಡು ಬಗೆಯ ಬದುಕು ಯಾವುದು?**

ಉ. ಅಶೋಕನು ಎರಡು ಬಗೆಯ ಬದುಕು ಸಾಗಿಸಿದವನು. ಒಂದು ನಿರ್ದಯಿ, ಆಕ್ರಮಣಕಾರನಾಗಿ ಹಾಗೂ ಇನ್ನೊಂದು ದಯಾಮಯ ಆಡಳಿತಗಾರನಾಗಿ.

**5. ಕಳಿಂಗ ಯುದ್ಧದ ಪರಿಣಾಮವೇನು?**

ಉ. ಕಳಿಂಗ ಯುದ್ಧವು ಕಡಿಮೆಯೆಂದರೂ ಮೂರು ಲಕ್ಷ ಜನರ ಬಲಿತೆಗೆದುಕೊಂಡಿತ್ತು. ಅಷ್ಟೇ ಸಂಖ್ಯೆಯ ಜನ ತಮ್ಮ ಅಂಗಾಂಗಗಳನ್ನು ಕಳಕೊಂಡಿದ್ದರು. ಅದು ಅಸಂಖ್ಯ ಜನರ ಸಾವು ನೋವಿಗೆ ಕಾರಣವಾಯಿತು.

**6. ಕಲಾಂ ಅವರಿಗೆ ಕನಸಿನಲ್ಲಿ ಅಶೋಕನು ಕಂಡಿದ್ದು ಹೇಗೆ?**

ಉ. ಕಲಾಂ ಅವರ ಕನಸಿನಲ್ಲಿ ಅಶೋಕ ಆಗ ತಾನೇ ದಿಗ್ವಿಜಯ ಸಾಧಿಸಿ ಮರಳಿ ಬಂದಂತಿದ್ದ. ಮರಳುಗಾಡಿನಲ್ಲಿ ಎಲ್ಲರೂ ಅವನನ್ನೇ ದಿಟ್ಟಿಸಿ ನೋಡುತ್ತಿದ್ದರು.



Scanned with CamScanner

ಅಷ್ಟರಲ್ಲಿ ಆತ ಮಂಡಿಯೂರಿ ಕುಳಿತು ಯುದ್ಧ ಕವಚ ಮತ್ತು ಕಿರೀಟವನ್ನು ಕಳಚಿಟ್ಟ. ಆತನ ಮುಖಯಾಕೋ ಕಳೆಗುಂದಿತ್ತು. ಅಸಂಖ್ಯ ಜನರ ಸಾವು ನೋವಿನಿಂದ ಅವನು ಚಿಂತಿತನಾದಂತೆ ಕಂಡು ಬರುತ್ತಿತ್ತು.

**7. ಯುದ್ಧ ಹಾಗೂ ಹತ್ಯೆಯ ಬಗೆಗೆ ಕಲಾಂ ಅವರನ್ನು ಕಾಡಿದ ಪ್ರಶ್ನೆಗಳಾವವು?**

ಉ. ಯುದ್ಧ ಹಾಗೂ ಹತ್ಯೆಯ ಬಗೆಗೆ ಕಲಾಂ ನಿಂತಲ್ಲೇ ಒಂದು ಕ್ಷಣ ಗಂಭೀರವಾಗಿ ಯೋಚಿಸಿದರು. ಆ ಕಳಿಂಗ ಯುದ್ಧವಾದರೂ ಯಾಕಾಯಿತು? ಮಹಾತ್ಮಾಗಾಂಧಿ, ಅಬ್ರಹಾಂ ಲಿಂಕನ್ ಮತ್ತು ಅವರಂಥ ಅನೇಕ ಮಹಾಪುರುಷರ ಹತ್ಯೆಯಾದರೂ ಯಾಕಾಯಿತು? ಆ ದೇವರು ತನ್ನ ಸೃಷ್ಟಿಯಲ್ಲಿ ಏನಾದರೂ ತಪ್ಪೆಸಗಿರುವನೇ? ಅಥವಾ ಎರಡನೇ ಸೃಷ್ಟಿಗಾಗಿ ಈ ಮಾನವ ಕುಲದ ನಾಶ ಅನಿವಾರ್ಯವೇ? ಎಂಬ ಪ್ರಶ್ನೆಗಳು ಅವರನ್ನು ಕಾಡಿದವು.

**8. ಕಲಾಂ ಅವರ ಕನಸಿನಲ್ಲಿ ಅಶೋಕನು ಯಾವ ಸಂದೇಶ ನೀಡಿದನು?**

ಉ. ಕಲಾಂ ಅವರ ಕನಸಿನಲ್ಲಿ ಅಶೋಕನು "ಜಯ ಎಂಬುದು ಸಾವು ನೋವು ಉಂಟು ಮಾಡುವುದರಲ್ಲಿಲ್ಲ. ಶಾಂತಿ ನೆಮ್ಮದಿಯ ಸಾಮ್ರಾಜ್ಯ ನಿರ್ಮಾಣವೇ ನಿಜವಾದ ಗೆಲುವು" ಎಂಬ ಸಂದೇಶವನ್ನು ನೀಡಿದನು.

**9. ಕನಸಿನ ಬಗ್ಗೆ ಕಲಾಂ ಅವರ ಸಂದೇಶವೇನು?**

ಉ. "ಕನಸು ಕಾಣಿರಿ, ಕನಸು ಕಾಣಿರಿ, ಕನಸು ಕಾಣಿರಿ ಕನಸುಗಳು ಯೋಚನೆಗ ರೂಪ ತಳೆಯುತ್ತವೆ. ಆಲೋಚನೆಗಳು ಕಾರ್ಯರೂಪಕ್ಕಿಳಿಯುತ್ತವೆ" ಎಂಬು ಕನಸಿನ ಬಗ್ಗೆ ಕಲಾಂ ಅವರ ಸಂದೇಶ.

Scanned with CamScanner

(ಈ) ಸಂದರ್ಭದೊಡನೆ ವಿವರಿಸಿರಿ.

**1. ನಾವು ನಿಜಕ್ಕೂ ಅದೃಷ್ಟ ಮಾಡಿರಬೇಕು!**

ಉ. ಆಯ್ಕೆ: ಈ ವಾಕ್ಯವನ್ನು ಎ.ಪಿ.ಜೆ. ಅಬ್ದುಲ್ ಕಲಾಂ ಅವರ 'ಪ್ರಜ್ವಲಿತ ದೀಪಗಳು' ಪುಸ್ತಕದ ಕನಸು ಮತ್ತು ಸಂದೇಶ ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : 2001ರ ಸೆಪ್ಟೆಂಬರ್ 30ರಂದು ರಾಂಚಿಯಿಂದ ಬೊಕಾರೋಗೆ ಕಲಾಂ ಅವರು ಪ್ರಯಾಣಿಸುತ್ತಿದ್ದರು. ಹೆಲಿಕಾಪ್ಟರ್ ಇನ್ನೇನು ಭೂಸ್ಪರ್ಶ ಮಾಡಬೇಕೆನ್ನುವಷ್ಟರಲ್ಲಿ ಭಾರೀ ಸದ್ದಿನೊಂದಿಗೆ ನೆಲಕ್ಕಪ್ಪಳಿಸಿತು. ಆದರೂ ಎಲ್ಲರೂ ಪವಾಡ ರೀತಿಯಲ್ಲಿ ಬದುಕುಳಿದರು. ಇದನ್ನು ಕಲಾಂ ಮೇಲಿನಂತೆ ಹೇಳುತ್ತಾರೆ.

ಸ್ವಾರಸ್ಯ : ಕಲಾಂ ಅವರು ತಾವು ಬದುಕಿ ಬಂದ ರೀತಿಯನ್ನು ಇಲ್ಲಿ ಹೇಳಿದ್ದಾರೆ.

**2. ನನ್ನ ಅತ್ಯಂತ ಮೆಚ್ಚಿನ ಮಹಾಪುರುಷರು ಅವರು ನಾನು ಆರಾಧಿಸುವಂಥವರು.**

ಉ. ಆಯ್ಕೆ: ಈ ವಾಕ್ಯವನ್ನು ಎ.ಪಿ.ಜೆ. ಅಬ್ದುಲ್ ಕಲಾಂ ಅವರ 'ಪ್ರಜ್ವಲಿತ ದೀಪಗಳು' ಪುಸ್ತಕದ ಕನಸು ಮತ್ತು ಸಂದೇಶ ಎಂಬ ಪಾಠದಿಂದ ಆರಿಸಲಾಗಿದೆ.

ಸಂದರ್ಭ : ಬೊಕಾರೋದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಕಲಾಂ ಅವರು ಭಾಷಣ ಮಾಡಿದ ರಾತ್ರಿ ಅವರಿಗೆ ಸವಿನಿದ್ದೆ ಬರಲಿಲ್ಲ. ಏನೇನೋ ಯೋಚನೆಗಳು ಬರ ತೊಡಗಿದವು. ಅಷ್ಟರಲ್ಲಿ ಐವರು ಮಹಾಮೇಧಾವಿಗಳು ಏನನ್ನೋ